ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 5, November-December 2023, Pp. 101-104
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಇಳಕಲ್ ತಾಲೂಕಿನ ಗ್ರಾನೈಟ್ ಗಣಿಗಾರಿಕೆಯ ಪರಿಸರ

**ಶರಣಬಸವ ಎಸ್ ಚೌಕಿಮಠ**
ಸಂಶೋಧನಾ ವಿದ್ಯಾರ್ಥಿ, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

***Abstract:***
*ಸ್ವಾತಂತ್ರ್ಯ ನಂತರ ಭಾರತ ದೇಶವು ಕಂಡುಕೊಂಡ ಅಭಿವೃದ್ಧಿ ನೀತಿಯು ಕೇವಲ ಬಂಡವಾಳವನ್ನು ಮರು ಉತ್ಪಾದಿಸುವ ಒಂದು ತಂತ್ರವಾಗಿ ಮಾತ್ರ ಬಳಕೆಯಾಯಿತು ಎಂದು ಹೇಳಲು ಯಾವುದೇ ಪುರಾವೆಗಳ ಅಗತ್ಯವಿಲ್ಲ. ಸಮಾಜವಾದಿ ಸಮಾಜದ ಕನಸುಗಳನ್ನು ಕಂಡ ಭಾರತದ ಅಂದಿನ ಹಿರೀಕರ ನಡೆಗಳಲ್ಲಿ ಅನೇಕ ಸಮಸ್ಯೆಗಳಿದ್ದವು. ಭಾರತದಂತಹ ದೇಶದಲ್ಲಿ ಈ ಬಗೆಯ ಅಭಿವೃದ್ಧಿ ನೀತಿಯು ಯಾವ ಕಾಲಕ್ಕೂ ಯಶಸ್ಸು ಕಾಣಲಾರದು. ಪ್ರಸ್ತುತ ಲೇಖನದಲ್ಲಿ ಇಳಕಲ್ ತಾಲೂಕಿನ ಗ್ರಾನೈಟ್ ಗಣಿಗಾರಿಕೆಯ ಪರಿಸರ ಕುರಿತು ಚರ್ಚಿಸಲಾಗಿದೆ. ಈ ಚರ್ಚೆಯು ಮುಖ್ಯವಾಗಿ ಕ್ಷೇತ್ರಕಾರ್ಯದಿಂದ ಪಡೆದ ಮಾಹಿತಿ ಮತ್ತು ಅಂಕಿ ಸಂಖ್ಯೆಗಳನ್ನು ಅವಲಂಬಿಸಿದೆ.*

***Keywords:*** *ಗ್ರಾನೈಟ್ ಗಣಿಗಾರಿಕೆ, ಅಭಿವೃದ್ಧಿ, ಕೃಷಿ, ಉದ್ಯೋಗ, ಇಳಕಲ್ ತಾಲೂಕು.*

## ಪೀಠಿಕೆ

ಭಾರತದ ಅಭಿವೃದ್ಧಿ ನೀತಿಯಿಂದಾಗಿ ಅನೇಕ ಅನುಕೂಲಗಳ ಜೊತೆಗೆ ಅನಾನುಕೂಲಗಳು ಕೂಡ ಎದುರಾಗುತ್ತಿವೆ. ಅವುಗಳಲ್ಲಿ ಗಣಿಗಾರಿಕೆ ಕೂಡ ಒಂದಾಗಿದೆ. ಗಣಿಗಾರಿಕೆಯಿಂದಾಗಿರುವ ಪರಿಣಾಮಗಳು ನಮ್ಮನ್ನು ಅನೇಕ ವರ್ಷಗಳ ಕಾಲ ಕಾಡುವುದರಲ್ಲಿ ಯಾವುದೇ ಅನುಮಾನವಿಲ್ಲ. ಗ್ರಾನೈಟ್ ಗಣಿಗಾರಿಕೆಗಳು ಕಾನೂನಾತ್ಮಕವಾಗಿ ನಡೆಯುತ್ತಿವೆಯಾದರೂ ಗಣಿಗಾರಿಕೆಗೆ ಸಂಬಂಧಿಸಿದಂತೆ ಸರಕಾರದ ನಿಲುವು ಮತ್ತು ಕಾನೂನುಗಳಲ್ಲಿ ಹಲವು ಲೋಪಗಳಿವೆ. ಹೀಗಾಗಿ ದೇಶದ ಅರಣ್ಯ ಪ್ರದೇಶ ಮತ್ತು ಬಯಲು ಪ್ರದೇಶಗಳಲ್ಲಿ ನಡೆಯುತ್ತಿರುವ ಗಣಿಗಾರಿಕೆಯು ಮನುಷ್ಯನ ಜೀವದಾಯಕ ಪರಿಸರವನ್ನು ಘೋರವಾಗಿ ನಿರ್ಲಕ್ಷಿಸುವ ಪ್ರವೃತ್ತಿಯನ್ನು ಸಹಜವಾಗಿಯೇ ಮೈಗೂಡಿಸಿಕೊಂಡಿದೆ. ಗಣಿಗಾರಿಕೆಯಿಂದ ಪರಿಸರದ ಮೇಲಾಗುತ್ತಿರುವ ಸಮಸ್ಯೆಗಳನ್ನು ಅಧ್ಯಯನ ಮಾಡುವುದು ಅತ್ಯಂತ ಮಹತ್ವದ ಸಂಗತಿಯಾಗಿದೆ. ಈ ಕಾರಣಕ್ಕಾಗಿ ಬಾಗಲಕೋಟೆ ಜಿಲ್ಲೆಯ ಇಳಕಲ್ ತಾಲೂಕಿನಲ್ಲಿ ನಡೆಯುವ ಗ್ರಾನೈಟ್ ಗಣಿಗಾರಿಕೆಯ ವಿಶಾಲ ಪ್ರದೇಶವನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡು ಕ್ಷೇತ್ರಕಾರ್ಯದ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

## ಭೌಗೋಳಿಕ ಪರಿಚಯ

ಇಳಕಲ್ ಬಾಗಲಕೋಟೆ ಜಿಲ್ಲೆಯ ಪ್ರಮುಖ ತಾಲೂಕುಗಳಲ್ಲಿ ಒಂದಾಗಿದೆ. ಈ ಪಟ್ಟಣವು ಬಾಗಲಕೋಟೆ ಜಿಲ್ಲೆಯ ಆಗ್ನೇಯ ಭಾಗದಲ್ಲಿದೆ ಮತ್ತು ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಗಡಿಗೆ ಸಾಕಷ್ಟು ಹತ್ತಿರದಲ್ಲಿದೆ. ಇಳಕಲ್ ಪಟ್ಟಣವು ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳೊಂದಿಗೆ ಉತ್ತಮ ಸಂಪರ್ಕ ಹೊಂದಿದ್ದು, ಉತ್ತಮ ವ್ಯಾಪಾರ ಕೇಂದ್ರವಾಗಿದೆ.

***Please cite this article as:*** ಶರಣಬಸವ ಎಸ್ ಚೌಕಿಮಠ. (2023). ಇಳಕಲ್ ತಾಲೂಕಿನ ಗ್ರಾನೈಟ್ ಗಣಿಗಾರಿಕೆಯ ಪರಿಸರ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 2(5), 101–104

ಇಳಕಲ್ ಪಟ್ಟಣವು ಗುಲಾಬಿ ಗ್ರಾನೈಟ್‌ಗೆ (ಮಾಣಿಕ್ಯ ಕೆಂಪು) ಹೆಸರುವಾಸಿಯಾಗಿದೆ. ಇದನ್ನು ಪ್ರಪಂಚದಾದ್ಯಂತ ರಫ್ತು ಮಾಡಲಾಗುತ್ತದೆ. ಪಟ್ಟಣವು ಸಮತಟ್ಟಾದ ಮೇಲ್ಮೈ ಮತ್ತು ಕೆಲವು ದಿಕ್ಕುಗಳಲ್ಲಿ ಸಣ್ಣ ಬೆಟ್ಟಗಳಿಂದ ಆವೃತವಾಗಿದೆ, ಈ ತಾಲೂಕಿನಲ್ಲಿ ಯಥೇಚ್ಛವಾದ ಗ್ರಾನೈಟ್ ಕಲ್ಲುಗಳ ಸಂಪನ್ಮೂಲವಿದೆ. ಇಳಕಲ್ ತಾಲೂಕಿನ ಮುಖ್ಯ ಆದಾಯದ ಮೂಲವೆಂದರೆ ಗ್ರಾನೈಟ್ ವ್ಯಾಪಾರ ಮತ್ತು ನೇಯ್ಗೆ. ಗ್ರಾನೈಟ್ ಗಣಿಗಾರಿಕೆ ಮತ್ತು ನೀರಿನ ಕೊರತೆಯಿಂದಾಗಿ ಕೃಷಿ ಹೆಚ್ಚು ಅಭಿವೃದ್ಧಿ ಹೊಂದಿಲ್ಲ. ಹಾಗಾಗಿ ಈ ತಾಲೂಕಿನಲ್ಲಿ ಕೃಷಿಯು ಹೆಚ್ಚು ಲಾಭದಾಯಕವಾಗಿಲ್ಲ. ಇಲಿ ಪ್ರಮುಖವಾಗಿ ಜೋಳ, ಸೂರ್ಯಕಾಂತಿಯನ್ನು ಬೆಳೆಯುತ್ತಾರೆ. ನೇಯ್ಗೆಗೆ ಪ್ರಸಿದ್ಧವಾಗಿರುವ ಈ ತಾಲೂಕು ಸೀರೆಗಳಿಗೆ ಹೆಚ್ಚು ಪ್ರಸಿದ್ಧವಾಗಿದೆ. ಇಳಕಲ್ ಶುದ್ಧ ರೇಷ್ಮೆ ಸೀರೆಗೆ 4000–12,000 ರೂಗಳು ವೆಚ್ಚವಾಗುತ್ತದೆ, ಆದರೆ ಇಳಕಲ್ ಚಮ್ಕಾ (ಹತ್ತಿ ಮತ್ತು ರೇಷ್ಮೆಯ ಪರ್ಯಾಯ ದಾರ) ಸೀರೆಯು 600–2000 ರೂ ವೆಚ್ಚವಾಗುತ್ತದೆ. ಕೈಮಗ್ಗ ನೇಯ್ಗೆ ಸಂಸ್ಕೃತಿಯು ಯಂತ್ರದಿಂದಾಗಿ ನೇಯ್ಗೆ ಶೈಲಿ ಮತ್ತು ಉದ್ಯಮ ಬದಲಾವಣೆಗೆ ಒಳಪಟ್ಟಿದೆ.

**ಅಧ್ಯಯನ ಕ್ಷೇತ್ರ**

ಪ್ರಸ್ತುತ ಅಧ್ಯಯನಕ್ಕೆ ಇಳಕಲ್ ತಾಲೂಕಿನಲ್ಲಿ ಗ್ರಾನೈಟ್ ಗಣಿಗಾರಿಕೆ ನಡೆಯುವ ಸುತ್ತಮುತ್ತಲಿನ ಗ್ರಾಮಗಳಾದ ಇಳಕಲ್ ಮತ್ತು ಹನಮಸಾಗರ ಮಾರ್ಗದಲ್ಲಿ ಬರುವ ಹೊಸೂರು, ಬಲಕುಂದಿ ತಾಂಡ, ಈಶ್ವರ ನಗರ, ಹೀರೆಪಾಲ ಗ್ರಾಮಗಳನ್ನೂ, ಇಳಕಲ್–ಕುಷ್ಟಗಿ ಮಾರ್ಗದಲ್ಲಿ ಬರುವ ಗೋನಾಳ, ಹನುಮನಾಳ, ಗೂಡುರ, ಚಿಕ್ಕಕೋಡಗಲಿ, ಕ್ಯಾದಿಗುಂಪಾ ಗ್ರಾಮಗಳನೂ, ಇಳಕಲ್–ಹುನಗುಂದ ಮಾರ್ಗದಲ್ಲಿ ಬರುವ ಗೋರೆಬಾಳ, ಹೇರೂರು, ಕೆಸರಭಾವಿ, ವೀರಾಪೂರ, ಅಮರಾವತಿ, ತೋಂಡಿಹಾಳ ಗ್ರಾಮಗಳನ್ನೂ, ಹಾಗೂ ಇಳಕಲ್–ಗೂಡುರ ಮಾರ್ಗದಲ್ಲಿ ಬರುವ ಯಡಹಳ್ಳಿ, ಚಿತ್ತವಾಡಗಿ ಗ್ರಾಮಗಳನ್ನೂ ಆಯ್ಕೆ ಮಾಡಿಕೊಂಡು ಮಾಹಿತಿ ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.

**ಅಧ್ಯಯನ ವಿಧಾನ**

ಪ್ರಸ್ತುತ ಅಧ್ಯಯನಕ್ಕೆ ಪ್ರಾಥಮಿಕ ಮತ್ತು ಮಾಧ್ಯಮಿಕ ಅಥವಾ ಆನುಷಂಗಿಕ ಮೂಲಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ. ಪ್ರಾಥಮಿಕ ಮಾಹಿತಿಯನ್ನು ಪ್ರಶ್ನಾವಳಿ, ಸಂದರ್ಶನ, ಅವಲೋಕನ, ವ್ಯಕ್ತಿ ಅಧ್ಯಯನ, ಐತಿಹಾಸಿಕ ವಿಧಾನಗಳನ್ನು ಬಳಸಿಕೊಂಡು ಸಂಗ್ರಹಿಸಲಾಗಿದೆ.

**ಗ್ರಾನೈಟ್ ಗಣಿಗಾರಿಕೆ**

ವಿಶ್ವದಲ್ಲಿ ಅತಿ ಹೆಚ್ಚು ಗ್ರಾನೈಟ್ ಗಣಿಗಾರಿಕೆ ನಡೆಸುತ್ತಿರುವ ದೇಶಗಳೆಂದರೆ ಚೀನಾ ಮತ್ತು ಭಾರತ. ಚೀನಾದಲ್ಲಿ ಭೂ ಆಳದ ಗಣಿಗಾರಿಕೆ ಹೆಚ್ಚಾಗಿ ನಡೆಯುತ್ತದೆ. ಭಾರತದಲ್ಲಿ ಮುಚ್ಚಿದ ಮತ್ತು ತೆರೆದ ಗಣಿಗಾರಿಕೆಗಳು ನಡೆಯುತ್ತದೆ. 'ರಾಜ್ಯದ ಇಳಕಲ್ ವಲಯದಿಂದಲೇ ಪ್ರಸ್ತುತ 3,000 ಕೋಟಿ ರೂಪಾಯಿ ಮೌಲ್ಯದ ಖನಿಜಗಳು ರಫ್ತಾಗುತ್ತಿವೆ. ಇಳಕಲ್ ತಾಲೂಕಿನಿಂದ ಗೋವಾ ಮೂಲಕ ಚೀನಾ ದೇಶಕ್ಕೆ ರಫ್ತು ಮಾಡಲಾಗುತ್ತದೆ.

ಬಾಗಲಕೋಟೆ ಜಿಲ್ಲೆಯಲ್ಲಿ ಗ್ರಾನೈಟ್ ಗಣಿಗಾರಿಕೆ, ಮ್ಯಾಂಗನೀಸ್, ಸುಣ್ಣದ ಕಲ್ಲಿನ ಗಣಿಗಾರಿಕೆ, ಬಿಳಿಕಲ್ಲಿನ ಗಣಿಗಾರಿಕೆ ಭರದಿಂದ ಸಾಗಿದೆ. ಸಣ್ಣ ಪ್ರಮಾಣದಿಂದ ಹಿಡಿದು ಬೃಹತ್ ಪ್ರಮಾಣದ ಗಣಿಗಾರಿಕೆಗಳು ನಡೆಯುತ್ತಿವೆ.

**ಗಣಿಗಾರಿಕೆಯ ಪ್ರಕ್ರಿಯೆ/ಚಟುವಟಿಕೆಗಳು**

**ಸಿಡಿಮದ್ದು ಸಿಡಿಸುವುದು:** ಬೆಟ್ಟ ಗುಡ್ಡಗಳ ಮೇಲೆ ಸಿಡಿಮದ್ದು ಸಿಡಿಸುವುದು ಗಣಿಗಾರಿಕೆಯ ಪ್ರಮುಖ ಚಟುವಟಿಕೆಗಳಲ್ಲೊ ಒಂದಾಗಿದೆ. ದೊಡ್ಡ–ದೊಡ್ಡ ಗಣಿಗಾರಿಕೆಯ ಸ್ಥಳಗಳಲ್ಲಿ ಈ ದೃಶ್ಯ ಕಂಡುಬರುತ್ತದೆ. ಸಿಡಿಮದ್ದು ಇಲ್ಲದಿದ್ದರೆ ಗಣಿಗಾರಿಕೆ ನಡೆಸಲು ಸಾಧ್ಯವಾಗುವುದಿಲ್ಲ.

**HITACHI ಯಂತ್ರಗಳ ಮೂಲಕ ಗ್ರಾನೈಟ್ ಹೊರತೆಗೆಯುವುದು:** Hitachi ಯಂತ್ರಗಳ ಮೂಲಕ ಕೂಡ ಗ್ರಾನೈಟ್‌ನ್ನು ಹೊರತೆಗೆಯುತ್ತಾರೆ. ಕೆಲವೊಂದು ಸಮಯದಲ್ಲಿ ಬೃಹತ್ ಪ್ರಮಾಣದ ಗ್ರಾನೈಟ್‌ನ್ನು ಹೊರ ತೆಗೆಯಬಹುದು ಅಥವಾ ವಿರಳವಾದ ಗ್ರಾನೈಟ್‌ಗಳಿದ್ದರೆ ಸಣ್ಣ ಪ್ರಮಾಣದ ಗ್ರಾನೈಟ್ ಉತ್ಪಾದನೆಯನ್ನು ಉತ್ಪಾದಿಸಬಹುದು. ಈ ಯಂತ್ರಗಳಿಂದ ಬೆಟ್ಟಗುಡ್ಡಗಳ ಮೇಲೆ ಸಿಡಿಮದ್ದು ಸ್ಫೋಟಿಸಿದ ಮೇಲೆ ಪುಡಿಯಾದ ಗ್ರಾನೈಟ್‌ನ್ನು ತುಂಬಲು ಬಳಸುತ್ತಾರೆ. ಬಯಲು ಪ್ರದೇಶದಲ್ಲಿ ಅಥವಾ ಕೃಷಿ ಭೂಮಿಯ ತಳಭಾಗದಲ್ಲಿ ದೊರೆಯುವ ಗ್ರಾನೈಟ್ ಹೊರತೆಗೆಯಲು

ಬಳಸಲಾಗುತ್ತದೆ. Hitachi ಯಂತ್ರದ ಬಳಕೆ ಗಣಿಗಾರಿಕೆಯ ಪ್ರಮುಖ ಚಟುವಟಿಕೆಯಾಗಿದೆ.

**ಕ್ರಶರ್‌ಗಳ ಬಳಕೆ**

ಕ್ರಶರ್‌ಗಳ ಮೂಲಕ ಮತ್ತು ಕೂಲಿ ಆಳುಗಳ ಮೂಲಕ ಗ್ರಾನೈಟ್ ಒಡೆಯುವುದು ಸಾಮಾನ್ಯ ಪ್ರಕ್ರಿಯೆಯಾಗಿದೆ. ಇತ್ತೀಚಿನ ದಿನಗಳಲ್ಲಿ ಗ್ರಾನೈಟ್ ಒಡೆಯುವುದರಲ್ಲಿ ಕ್ರಶರ್‌ಗಳು ಪ್ರಮುಖ ಪಾತ್ರ ವಹಿಸುತ್ತಿವೆ. ಕ್ರಶರ್‌ಗಳ ಮೂಲಕ ಬೃಹತ್ ಪ್ರಮಾಣದಲ್ಲಿ ಗ್ರಾನೈಟ್‌ಗಳನ್ನು ಒಡೆದು ಒಂದು ನಿರ್ದಿಷ್ಟ ಸ್ಥಳದಲ್ಲಿ ಶೇಖರಿಸಿ ನಂತರ ವಿಲೇವಾರಿ ಮಾಡಲಾಗುತ್ತದೆ.

**ಗ್ರಾನೈಟ್ ತುಕಡಿಗಳ ಸಂಗ್ರಹ**

**ರೈತರ ಜಮೀನಿನಲ್ಲಿ:** ಗ್ರಾನೈಟ್‌ನ ಸಂಗ್ರಹಣೆಯಲ್ಲಿ ರೈತರ ಜಮೀನುಗಳು ಪ್ರಮುಖ ಪಾತ್ರವಹಿಸುತ್ತವೆ. ಗ್ರಾನೈಟ್ ಪುಡಿಯ ಸಂಗ್ರಹಕ್ಕಾಗಿ ಎಕರೆಗೆ ಪ್ರತಿವರ್ಷಕ್ಕೆ 20 ರಿಂದ 40 ಸಾವಿರ ರೂಪಾಯಿ ಬಾಡಿಗೆ ಕೊಟ್ಟು ರೈತರ ಜಮೀನುಗಳನ್ನು ಪಡೆದುಕೊಳ್ಳುತ್ತಾರೆ. ಹಣದ ಆಸೆಗಾಗಿ ರೈತರ ಜಮೀನುಗಳು ಇಂದು ಗ್ರಾನೈಟ್ ಸಂಗ್ರಹದ ಕಣಜಗಳಾಗುತ್ತಿವೆ.

**ಗಣಿ ಮಾಲೀಕರ ಸ್ಥಳಗಳಲ್ಲಿ:** ಕೆಲವು ಕಡೆ ಗ್ರಾನೈಟ್ ಪುಡಿಯ ಸಂಗ್ರಹಣೆಯನ್ನು ಗಣಿ ಮಾಲೀಕರು ತಮ್ಮ ಸ್ಥಳಗಳಲ್ಲಿಯೇ ಸಂಗ್ರಹಿಸಿಕೊಂಡಿರುತ್ತಾರೆ.

**ಪಾಳು ಭೂಮಿಯಲ್ಲಿ:** ಕೆಲವು ಕಡೆ ಪಾಳು ಭೂಮಿಯಲ್ಲಿ ಗ್ರಾನೈಟ್ ಸಂಗ್ರಹಿಸಲಾಗಿದೆ. ಬೆಟ್ಟ–ಗುಡ್ಡ, ಪಾಳು ಭೂಮಿ, ಗಿಡಗಂಟಿ ಬೆಳೆದಿರುವ ಪ್ರದೇಶಗಳನ್ನು ಹಸನಾಗಿಸಿ ಗ್ರಾನೈಟ್ ಪುಡಿಯನ್ನು ಸಂಗ್ರಹಿಸಲಾಗುತ್ತದೆ.

**ಗ್ರಾನೈಟ್ ತುಕಡಿಗಳ ಸಾಗಣೆ**

**ಲಾರಿಗಳ ಮೂಲಕ:** ಇಳಕಲ್–ಕುಷ್ಟಗಿ ಭಾಗಗಳಿಂದ ಪ್ರತಿದಿನ 100 ರಿಂದ 200 ಲಾರಿಗಳು ಗ್ರಾನೈಟ್ ತುಂಬಿಕೊಂಡು ಓಡಾಡುತ್ತವೆ. ಗ್ರಾನೈಟ್ ಸಾಗಣಿಕೆಯಲ್ಲಿ ಲಾರಿ/ಟಿಪ್ಪರ್‌ಗಳು ಪ್ರಮುಖ ಪಾತ್ರ ವಹಿಸುತ್ತವೆ. ದಿನನಿತ್ಯ ಸಾವಿರಾರು ಲಾರಿಗಳು ಗಣಿಗಾರಿಕೆಯ ಚಟುವಟಿಕೆಗಳಲ್ಲಿ ತೊಡಗಿದ್ದು, ಬೆಟ್ಟ–ಗುಡ್ಡಗಳ ಮೇಲಿಂದ ಕೆಳಗೆ ತರಲು ಹಾಗೂ ಬೇರೆಡೆಗೆ ಸಾಗಿಸಲು ಪ್ರಮುಖ ಪಾತ್ರವಹಿಸಿವೆ.

ಹೀಗೆ ಗಣಿಗಾರಿಕೆಯು ಹಲವಾರು ವಿಧದ ಪ್ರಕ್ರಿಯೆಗಳ ಮೂಲಕ ಸಾಗುತ್ತದೆ. ಹೊಸೂರು ಬಲಕುಂದಿ, ಹೀರೆಪಾಲ, ಈಶ್ವರನಗರ ಗ್ರಾಮಗಳಲ್ಲಿ ಗ್ರಾನೈಟ್ ಹೊರ ತೆಗೆಯುತ್ತಿದ್ದು, ಗೋನಾಳ, ಹನಮನಾಳ, ಗೂಡುರ ಚಿಕ್ಕಕೊಡಗಲಿಗಳಲ್ಲಿ ದೊಡ್ಡ ಪ್ರಮಾಣದ ಕಲ್ಲಿನ ಕ್ವಾರೆಯ ಕ್ರಶರ್‌ಗಳು ಕೆಲಸ ನಿರ್ವಹಿಸುತ್ತಿವೆ. ಗೋರೇಭಾಳ, ಹೇರೂರು, ವೀರಾಪೂರ, ಗಣಿಗಾರಿಕೆಯು ಸಹ ನಡೆಯುತ್ತಿದೆ. ಈ ಪ್ರದೇಶದಲ್ಲಿ ಹೆಚ್ಚಾಗಿ ಗಣಿಗಾರಿಕೆಯನ್ನು ಅವಲಂಬಿಸಿದ್ದಾರೆ. ಕಲ್ಲಗೋನಾಳದಲ್ಲಿ ಸಣ್ಣ ಪ್ರಮಾಣದಲ್ಲಿ ಗ್ರಾನೈಟ್ ದೊರೆಯುತ್ತದೆ.

ಗಣಿಗಾರಿಕೆಯ ಈ ಎಲ್ಲಾ ಚಟುವಟಿಕೆಗಲೂ ಕೃಷಿ ಸಮುದಾಯದ ಮೇಲೆ ಮತ್ತು ಕೃಷಿಯ ಮೇಲೆ ಅನೇಕ ಅಡ್ಡಪರಿಣಾಮಗಳನ್ನು ಬೀರುತ್ತಿವೆ, ವಿಪರೀತ ಗಣಿಗಾರಿಕೆಯಿಂದ ಕೃಷಿ ಭೂಮಿ ಬಂಜರಾಗುತ್ತದೆ. ಆ ಪ್ರದೇಶದ ಮಣ್ಣಿನಲ್ಲಿ ನೀರಿನ ಇಂಗುವಿಕೆಯ ಪ್ರಮಾಣ ಕುಸಿಯುತ್ತದೆ. ಇದರಿಂದಾಗಿ ನೀರಿನ ಕೊರತೆಯುಂಟಾಗಿ ರೈತರ ಇಳುವರಿ ಕಡಿಮೆಯಾಗುತ್ತದೆಯಲ್ಲದೆ, ಅಂತರ್ಜಲ ಮಟ್ಟವೂ ಕೂಡ ಕುಸಿಯುತ್ತದೆ. ಇದರಿಂದಾಗಿ ರೈತ ಕ್ರಮೇಣ ಕೃಷಿಯ ಮೇಲಿನ ಆಸಕ್ತಿಯನ್ನು ಕಳೆದುಕೊಂಡು ಹೆಚ್ಚು ಲಾಭ ಕೊಡುವ ಗಣಿಗಾರಿಕೆಗೆ ತನ್ನ ಜಮೀನನ್ನು ಬಿಟ್ಟುಕೊಡುವ ನಿರ್ಧಾರ ಮಾಡುತ್ತಾನೆ. ಇಲ್ಲವೆ ಗಣಿಮಾಲೀಕನ ಅತಿಯಾದ ಒತ್ತಡದಿಂದಲಾದರೂ ತನ್ನ ಕೃಷಿ ಜಮೀನನ್ನು ಮಾರಬೇಕಾಗುತ್ತದೆ. ಗ್ರಾನೈಟ್ ಸಂಗ್ರಹಿಸಲೆಂದು ಹಲವು ಸಲ ನಿರ್ಮಾಣವಾಗುವ ಸಂಗ್ರಹ ಕೇಂದ್ರಗಳಿಗೆ ರೈತರು ಅನಿವಾರ್ಯದಿಂದ ಇಲ್ಲವೆ ಒತ್ತಡದ ಕಾರಣಗಳಿಗಾಗಿ ತಮ್ಮ ಜಮೀನನ್ನು ಗುತ್ತಿಗೆ ರೂಪದಲ್ಲಿ ಗಣಿಮಾಲೀಕರಿಗೆ ನೀಡ ಬೇಕಾಗುತ್ತದೆ. ಅತಿಯಾದ ಗಣಿಗಾರಿಕೆಯಿಂದ ಹಾರುವ ಧೂಳು ನೈಸರ್ಗಿಕ ಹುಲ್ಲುಗಾವಲುಗಳನ್ನು ನಾಶ ಮಾಡುತ್ತದೆ. ಈ ಕಾರಣಕ್ಕಾಗಿ ಭೂಸವಕಳಿ ಉಂಟಾಗಿ ಕೆರೆ, ಹಳ್ಳಗಳಲ್ಲಿ ಹೂಳು ತುಂಬಿ ಸಹಜ ನೀರಾವರಿ ವ್ಯವಸ್ಥೆಯು ನಾಶವಾಗುತ್ತದೆ. ಈ ಮೇಲೆ ವಿವರಿಸಿದ ಗಣಿಗಾರಿಕೆಯ ವಿವಿಧ ಚಟುವಟಿಕೆಗಳಿಂದ ರೈತ ಸಮುದಾಯ ಮಾತ್ರವಲ್ಲದೆ ಸುತ್ತಮುತ್ತ ವಾಸಿಸುವ ಜನರೂ ಕಂಗಾಲಾಗಿದ್ದಾರೆ.

**ಪರಾಮರ್ಶನ ಗ್ರಂಥಗಳು**


- ಅಂಬಳಿಕೆ ಹಿರಿಯಣ್ಣ. (2015). ಕರ್ನಾಟಕ ಗ್ರಾಮ ಚರಿತ್ರೆಕೋಶ, ಬಾಗಲಕೋಟ.
- ದೇವರಕೊಂಡಾರೆಡ್ಡಿ. (2006). *ಬಾಗಲಕೋಟೆ ಜಿಲ್ಲೆ.* ಶಾಸನ ಸಂ–9, ಪು.ಸ.120,
- ಗೋಪಾಲ ಆರ್. (2011). ಬಾಗಲಕೋಟ ಜಿಲ್ಲೆಯ ಇತಿಹಾಸ ಪುರಾತತ್ವ. ಪ.ಸಂ.70.
- ಗೋಪಾಲ ಆರ್. (2011). *ಬಾಗಲಕೋಟ ಜಿಲ್ಲೆಯ ಇತಿಹಾಸ ಪುರಾತತ್ವ,* ಪು.ಸಂ.72,
- Venkat, R. D. (2011). *Correlation between Petrographical and engineering properties of Ilkal granites, Karnataka*. https://idr.nitk.ac.in/jspui/handle/123456789/10409